ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	683
ಮಾನ್ಯ ಸದಸ್ಯರ ಹೆಸರು	ಶ್ರೀ ಐವನ್ ಡಿಸೋಜ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದವರು	ಅಬಕಾರಿ ಸಚಿವರು
ಉತ್ತರಿಸಬೇಕಾದ ದಿನಾಂಕ	12-03-2020

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ಅಬಕಾರಿ ಇಲಾಖೆಯಲ್ಲಿ CL-5 ಒಂದು ದಿನಕ್ಕಾಗಿ ನೀಡುವ ಪರವಾನಗಿ' ಯಾವ ಉದ್ದೇಶಕ್ಕಾಗಿ ನೀಡಲಾಗುತ್ತದೆ; ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ 2018-19, 2019-20 ರಲ್ಲಿ ಎಷ್ಟು ಇಂತಹ ಪರವಾನಿಗೆ ಪಡೆಯಲಾಗಿದೆ: (ವಿವರ ನೀಡುವುದು)	ಅಬಕಾರಿ ಇಲಾಖೆಯಲ್ಲಿ ಹುಟ್ಟು ಹಬ್ಬ, ಮದುವೆ, ಚಿಕ್ಕಪುಟ್ಟ ಕಾರ್ಯಕ್ರಮಗಳು, ಸಭೆಗಳು, ಸಾರ್ವಜನಿಕರ ಮನರಂಜನೆ ಮತ್ತು ಇತರೆ ಸಾರ್ವಜನಿಕ ಕೂಟಗಳಲ್ಲಿ ಮದ್ಯ ವಿತರಣೆಗೆ CL-5 ಒಂದು ದಿನಕ್ಕಾಗಿ ನೀಡುವ ಸಾಂದರ್ಭಿಕ ಪರವಾನಗಿಗಳನ್ನು ಫಾರಂ ಸಿಎಲ್-5 ರಲ್ಲಿ ನೀಡಲಾಗುತ್ತದೆ. ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ 2018-19 ಮತ್ತು 2019-20 ರಲ್ಲಿ ಮಂಜೂರು ಮಾಡಿರುವ CL-5 ಸನ್ನದುಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
(ಆ)	CL-5, ಹುಟ್ಟು ಹಬ್ಬ, ಮದುವೆ ಹಾಗೂ ಇನ್ನಿತರ ಚಿಕ್ಕ ಕಾರ್ಯಕ್ರಮಗಳಿಗೆ ಮದ್ಯವನ್ನು ವಿತರಿಸುವ ಸಂದರ್ಭದಲ್ಲಿ ಈ ಪರವಾನಗಿ ಅಗತ್ಯವಿದೆಯೇ: ಪರವಾನಗಿ ಎಷ್ಟು ದಿನದ ಮುಂಚಿತವಾಗಿ ನೀಡಲಾಗುತ್ತಿದೆ: ಇದಕ್ಕೆ ತಗಲುವ ವೆಚ್ಚ ಎಷ್ಟು: (ವಿವರ ನೀಡುವುದು)	ಅಕ್ರಮ ಮದ್ಯ ಸಾಗಾಟ, ದಾಸ್ತಾನು ಮತ್ತು ಮಾರಾಟ ಮಾಡುವ ಚಟುವಟಿಕೆಗಳನ್ನು ತಡೆಹಿಡಿಯುವ ಸಲುವಾಗಿ ಹುಟ್ಟು ಹಬ್ಬ, ಮದುವೆ ಹಾಗೂ ಇನ್ನಿತರ ಚಿಕ್ಕ ಕಾರ್ಯಕ್ರಮಗಳಿಗೆ ಮದ್ಯವನ್ನು ವಿತರಿಸುವ ಸಂದರ್ಭದಲ್ಲಿ CL-5 ಸನ್ನದುಗಳ ಪರವಾನಗಿ ಅಗತ್ಯವಿರುತ್ತದೆ. ಸದರಿ CL-5 ಸನ್ನದುಗಳ ಪರವಾನಗಿಯನ್ನು ಅರ್ಜಿದಾರರು Online ಮುಖಾಂತರ ಅರ್ಜಿ ಸಲ್ಲಿಸಿದ ನಂತರ ಮದ್ಯ ವಿತರಿಸಲು ಉದ್ದೇಶಿಸಿದ ದಿನಾಂಕಕ್ಕಿಂತ ಪೂರ್ವದಲ್ಲಿ ನೀಡಲಾಗುತ್ತದೆ. CL-5 ಸನ್ನದು ಪಡೆಯಲು ರೂ. 10,000/- ಗಳ ಸನ್ನದು ಶುಲ್ಕ ಹಾಗೂ ರೂ. 1,500/- ಗಳ ಹೆಚ್ಚುವರಿ ಸನ್ನದು ಶುಲ್ಕಗಳನ್ನು ಪಾವತಿಸಬೇಕಾಗುತ್ತದೆ.
(ಇ)	ಪರವಾನಗಿ ಪಡೆಯಲು ಬೇಕಾಗಿರುವ ದಾಖಲೆಗಳು ಯಾವುವು: ಮದ್ಯವನ್ನು ಎಲ್ಲಿಂದ ಖರೀದಿ ಮಾಡಬೇಕು: (ವಿವರ ನೀಡುವುದು)	**CL-5 ಸನ್ನದು ಪಡೆಯಲು ಕೆಳಕಂಡ ದಾಖಲಾತಿಗಳನ್ನು Online ಮುಖಾಂತರ ಸಲ್ಲಿಸಬೇಕಾಗಿರುತ್ತದೆ.** 1) ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿ. 2) ನಿಗಧಿತ ಸನ್ನದು ಶುಲ್ಕ ಪಾವತಿಸಿರುವ ಚಲನ್ ಪ್ರತಿ. 3) ಪ್ರಸ್ತಾಪಿತ ಸ್ಥಳದ ನೀಲಿ ನಕಾಶೆ. 4) ಸ್ಥಳೀಯ ಪೊಲೀಸ್ ಇಲಾಖೆಯಿಂದ ಪಡೆದ ನಿರಾಕ್ಷೇಪಣಾ ಪತ್ರ. 5) ಕೆ.ಎಸ್.ಬಿ.ಸಿ.ಎಲ್. ನಿಂದ ಪಡೆಯುವ ಮದ್ಯದ ಬ್ರಾಂಡ್‌ನ ವಿವರ.

<table>
<tr><td></td><td></td><td>ಮದ್ಯವನ್ನು ವ್ಯಾಪ್ತಿಯ ಕರ್ನಾಟಕ ರಾಜ್ಯ ಪಾನೀಯ ನಿಗಮದ ಡಿಪೋಗಳಿಂದಲೇ ಖರೀದಿ ಮಾಡಬೇಕಾಗಿರುತ್ತದೆ.</td></tr>
<tr><td>(ಈ)</td><td>ಸಾರ್ವಜನಿಕ ಹಾಲ್‌ಗಳಲ್ಲಿ ಮದುವೆ ಮುಂತಾದ ಕಾರ್ಯಕ್ರಮಗಳಲಿ ಮದ್ಯ ವಿತರಣೆಗೆ ಅವಕಾಶ ನೀಡಲಾಗುತ್ತಿದೆಯೇ: 2018–19, 2019–20 ರಲ್ಲಿ ರಾಜ್ಯದಲ್ಲಿ ಅಬಕಾರಿ ಇಲಾಖೆಗೆ ಎಷ್ಟು ಸುಂಕ ವಸೂಲಾಗಿರುತ್ತದೆ: ವಸೂಲಿಗೆ ಇದ್ದ ಗುರಿ ಎಷ್ಟು: (ವಿವರ ನೀಡುವುದು)</td><td>CL–5 ಸನ್ನದು ಪಡೆದಿದ್ದಲ್ಲಿ ಸಾರ್ವಜನಿಕ ಹಾಲ್‌ಗಳಲ್ಲಿ ಮದುವೆ ಮುಂತಾದ ಕಾರ್ಯಕ್ರಮಗಳಲಿ ಮದ್ಯ ವಿತರಣೆಗೆ ಅವಕಾಶ ನೀಡಲಾಗುತ್ತಿದೆ.

2018–19 ಮತ್ತು 2019–20 ಸಾಲಿನಲ್ಲಿ ಸರ್ಕಾರ ನಿಗದಿ ಪಡಿಸಿದ ಗುರಿ ಮತ್ತು ಸಂಗ್ರಹವಾದ ರಾಜಸ್ವದ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ. ಕೋಟಿಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ನಿಗದಿ ಪಡಿಸಿದ ಗುರಿ</th><th>ಸಂಗ್ರಹವಾದ ರಾಜಸ್ವ</th></tr>
<tr><td>1.</td><td>2018–19</td><td>19750.00</td><td>19943.93</td></tr>
<tr><td>2.</td><td>2019–20</td><td>20950.00</td><td>19,831.58* (ಫೆಬ್ರವರಿ 2020ರ ಅಂತ್ಯಕ್ಕೆ)</td></tr>
</table>
*ಮರುಹೊಂದಾಣಿಕೆಗೊಳಪಟ್ಟಿರುತ್ತದೆ.</td></tr>
<tr><td>(ಉ)</td><td>ಫೋನ್ ಮೂಲಕ ಮದ್ಯ ಖರೀದಿಸುವ ಯೋಜನೆ ಜಾರಿಗೆ ಬಂದಿದೆಯೇ: (ವಿವರ ನೀಡುವುದು)</td><td>ಇಲ್ಲ.</td></tr>
<tr><td>(ಊ)</td><td>ಅಕ್ರಮವಾಗಿ ಮದ್ಯ ಮಾರಾಟ ಮಾಡುವವರ ಮೇಲೆ 2018–19, 2019–20 ರಲ್ಲಿ ಎಷ್ಟು ಪ್ರಕರಣಗಳು ದಾಖಲಿಸಲಾಗಿದೆ? (ವಿವರ ನೀಡುವುದು)</td><td>ಅಕ್ರಮವಾಗಿ ಮದ್ಯ ಮಾರಾಟ ಮಾಡುವವರ ವಿರುದ್ಧ ರಾಜ್ಯದಾದ್ಯಂತ 2018–19 ಮತ್ತು 2019–20 (ಜನವರಿ ಅಂತ್ಯದವರೆಗೆ) ನೇ ಅಬಕಾರಿ ಸಾಲುಗಳಲ್ಲಿ ಕ್ರಮವಾಗಿ 27786 ಮತ್ತು 12981 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–02 ರಲ್ಲಿ ನೀಡಲಾಗಿದೆ.</td></tr>
</table>

11/3/20

(ಎಚ್. ನಾಗೇಶ್)
ಅಬಕಾರಿ ಸಚಿವರು

ಆಇ 16 ಇಎಲ್ ಕ್ಯೂ 2020

ವಿಧಾನಪರಿಷತ್ತಿನ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:683 ಕ್ಕೆ ಉತ್ತರದ ಅನುಬಂಧ-1

2018-19 ಮತ್ತು 2019-20 ನೇ ಸಾಲಿನಲ್ಲಿ ಮಂಜೂರು ಮಾಡಲಾದ ಸಿಎಲ್-5 ಸನ್ನದುಗಳ ಮಾಹಿತಿ			
ಕ್ರ.ಸಂ.	ಜಿಲ್ಲೆ	2018-19	2019-20 (ಫೆಬ್ರವರಿ-2020 ರವರೆಗೆ)
1	ಬೆಂಗಳೂರು ಪೂರ್ವ	95	125
2	ಬೆಂಗಳೂರು ಪಶ್ಚಿಮ	63	35
3	ಬೆಂಗಳೂರು ಉತ್ತರ	116	118
4	ಬೆಂಗಳೂರು ದಕ್ಷಿಣ	103	138
5	ಬೆಂಗಳೂರು ಗ್ರಾಮಾಂತರ	15	17
6	ಚಿಕ್ಕಬಳ್ಳಾಪುರ	1	1
7	ಕೋಲಾರ	1	0
8	ರಾಮನಗರ	4	5
9	ತುಮಕೂರು	1	5
10	ಚಾಮರಾಜನಗರ	0	0
11	ಚಿಕ್ಕಮಗಳೂರು	16	10
12	ಹಾಸನ	0	3
13	ಮಂಡ್ಯ	0	1
14	ಮೈಸೂರು	10	10
15	ದಕ್ಷಿಣ ಕನ್ನಡ	345	232
16	ಕೊಡಗು	32	1
17	ಶಿವಮೊಗ್ಗ	6	3
18	ಉಡುಪಿ	142	92
19	ಉತ್ತರ ಕನ್ನಡ	19	12
20	ಬಾಗಲಕೋಟೆ	1	2
21	ಬೆಳಗಾಂ	9	8
22	ವಿಜಯಪುರ	1	1
23	ಧಾರವಾಡ	1	0
24	ಹಾವೇರಿ	0	0

..2.

25	ಬೀದರ್	0	0
26	ಕಲಬುರಗಿ	0	0
27	ರಾಯಚೂರು	0	1
28	ಯಾದಗಿರಿ	0	0
29	ಬಳ್ಳಾರಿ	1	1
30	ಚಿತ್ರದುರ್ಗ	0	0
31	ದಾವಣಗೆರೆ	2	0
32	ಗದಗ	0	1
33	ಕೊಪ್ಪಳ	0	1
	ಒಟ್ಟು	**984**	**823**

ಆಇ 16 ಇ.ಎಲ್.ಕ್ಯೂ 2020

ವಿಧಾನಪರಿಷತ್ತಿನ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:683 ಕ್ಕೆ ಉತ್ತರದ ಅನುಬಂಧ–2

2018–19 ಮತ್ತು 2019–20ನೇ ಸಾಲಿನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ದಾಖಲಿಸಿದ ಪ್ರಕರಣಗಳ ವಿವರಗಳು

ಕ್ರ. ಸಂ	ಜಿಲ್ಲೆಗಳು	ದಾಖಲಿಸಿದ ಪ್ರಕರಣಗಳ ಸಂಖ್ಯೆ	
		2018–19 (ಜುಲೈನಿಂದ ಜೂನ್‌ವರೆಗೆ)	**2019–20** (ಜುಲೈನಿಂದ ಜನವರಿವರೆಗೆ)
	ಬೆಂಗಳೂರು ವಿಭಾಗ		
1(ಎ)	ಬೆಂಗಳೂರು ಪೂರ್ವ	1272	362
1(ಬಿ)	ಬೆಂಗಳೂರು ಪಶ್ಚಿಮ	910	406
1(ಸಿ)	ಬೆಂಗಳೂರು ಉತ್ತರ	1008	398
1(ಡಿ)	ಬೆಂಗಳೂರು ದಕ್ಷಿಣ	700	343
1	**ಬೆಂಗಳೂರು ನಗರ ಜಿಲ್ಲೆ**	**3890**	**1509**
2	ಬೆಂಗಳೂರು ಗ್ರಾಮಾಂತರ	963	509
3	ಚಿಕ್ಕಬಳ್ಳಾಪುರ	565	342
4	ಕೋಲಾರ	779	397
5	ರಾಮನಗರ	849	372
6	ತುಮಕೂರು	1397	856
	ಒಟ್ಟು	**8443**	**3985**
	ಬೆಳಗಾವಿ ವಿಭಾಗ		
1	ಬಾಗಲಕೋಟೆ	539	185
2	ಬೆಳಗಾವಿ	1183	543
3	ವಿಜಯಪುರ	781	375
4	ಧಾರವಾಡ	564	220
5	ಹಾವೇರಿ	644	430
	ಒಟ್ಟು	**3711**	**1753**
	ಕಲಬುರಗಿ ವಿಭಾಗ		
1	ಬೀದರ್	713	428
2	ಕಲಬುರಗಿ	787	484
3	ರಾಯಚೂರು	362	213
4	ಯಾದಗಿರಿ	515	348
	ಒಟ್ಟು	**2377**	**1473**
	ಹೊಸಪೇಟೆ ವಿಭಾಗ		
1	ಬಳ್ಳಾರಿ	1391	515
2	ಚಿತ್ರದುರ್ಗ	851	374
3	ದಾವಣಗೆರೆ	1472	479

4	ಗದಗ	571	289
5	ಕೊಪ್ಪಳ	531	209
ಒಟ್ಟು		**4816**	**1866**
ಮಂಗಳೂರು ವಿಭಾಗ			
1	ದಕ್ಷಿಣ ಕನ್ನಡ	1082	450
2	ಕೊಡಗು	513	115
3	ಶಿವಮೊಗ್ಗ	1837	631
4	ಉಡುಪಿ	241	137
5	ಉತ್ತರ ಕನ್ನಡ	645	347
ಒಟ್ಟು		**4318**	**1680**
ಮೈಸೂರು ವಿಭಾಗ			
1	ಚಾಮರಾಜನಗರ	632	283
2	ಚಿಕ್ಕಮಗಳೂರು	723	328
3	ಹಾಸನ	858	414
4	ಮಂಡ್ಯ	1002	634
5	ಮೈಸೂರು	906	565
ಒಟ್ಟು		**4121**	**2224**
ರಾಜ್ಯದ ಒಟ್ಟು		**27786**	**12981**

ಆಇ 16 ಇ.ಎಲ್.ಕ್ಯೂ 2020